# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೩<br>Part – III | ಬೆಂಗಳೂರು, ಸೋಮವಾರ, ೦೫, ಜನವರಿ, ೨೦೨೬(ಪುಷ್ಯ, ೧೫, ಶಕವರ್ಷ, ೧೯೪೭)<br>BENGALURU, MONDAY, 05, JANUARY, 2026(PUSHYA , 15, SHAKAVARSHA, 1947) | ನಂ. ೦೬<br>No. 06 |


**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ: ಟಿಡಿ 167 ಟಿಡಿಒ 2025

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:05.01.2026.

**<u>ಅಧಿಸೂಚನೆ</u>**

ಕರ್ನಾಟಕ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ ಸಾರಿಇ 100 ಸಾಇಪ 2013, ದಿನಾಂಕ:30-09-2014 ನ್ನು ತಿದ್ದುಪಡಿ ಮಾಡಿ, ಬಿಟಿಎಸ್ ಯೋಜನೆಯ ವ್ಯಾಪ್ತಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಪ್ರದೇಶಗಳು ಹಾಗೂ ಅದರ ಗಡಿಯಿಂದ 40.0 ಕಿ.ಮೀ. ವರೆಗಿನ ವ್ಯಾಪ್ತಿಯ ಸುತ್ತಮುತ್ತಲಿನ ಪ್ರದೇಶಗಳಿಗೆ ವಿಸ್ತರಿಸಲು ಪ್ರಸ್ತಾಪಿಸಿರುತ್ತದೆ. ಅದರಂತೆ Karnataka General Clauses Act-1899 (Karnataka Act No.III/1899) ಸೆಕ್ಷನ್ 21 ಅನ್ನು ಜೊತೆಯಲ್ಲಿ ಓದಿಕೊಂಡು ಮೋಟಾರು ವಾಹನ ಕಾಯಿದೆ, 1988 (ಕೇಂದ್ರ ಕಾಯಿದೆ ಸಂಖ್ಯೆ 59/1988)ರ ಕಲಂ 102ರ ಉಪಕಲಂ (2) ರಲ್ಲಿ ಅಗತ್ಯಪಡಿಸಿರುವಂತೆ ಕರ್ನಾಟಕ ವಿಶೇಷ ರಾಜ್ಯ ಪತ್ರ ಸಂಖ್ಯೆ: 601 ದಿನಾಂಕ: 19-09-2025 ರ ಭಾಗ-IVA ರಲ್ಲಿ ಕರಡು ಅಧಿಸೂಚನೆ ಸಂಖ್ಯೆ ಟಿಡಿ 167 ಟಿಡಿಒ 2025 ದಿನಾಂಕ:18-09-2025 ಅನ್ನು ಪ್ರಕಟಿಸಿ, ರಾಜ್ಯ ಸಾರಿಗೆ ಸಂಸ್ಥೆ ಹಾಗೂ ಈ ತಿದ್ದುಪಡಿಯಿಂದ ಭಾಧಿತರಾಗಬಹುದಾದ ಯಾವುದೇ ವ್ಯಕ್ತಿಯನ್ನು ಆಲಿಸುವ ಅವಕಾಶ ಕಲ್ಪಿಸಿ, ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಭಾದಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಅಹ್ವಾನಿಸಲಾಗಿತ್ತು.

ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ದಿನಾಂಕ: 19-09-2025 ರಂದು ಲಭ್ಯ ಪಡಿಸಲಾಯಿತು.

ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ಯಾವುದೇ ಆಕ್ಷೇಪಣೆಗಳು ಅಥವಾ ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

ಆದ್ದರಿಂದ, Karnataka General Clauses Act-1899 (Karnataka Act No.III/1899) ಸೆಕ್ಷನ್ 21 ಅನ್ನು ಜೊತೆಯಲ್ಲಿ ಓದಿಕೊಂಡು ಮೋಟಾರು ವಾಹನ ಕಾಯಿದೆ 1988 (ಕೇಂದ್ರ ಕಾಯಿದೆ ಸಂಖ್ಯೆ 59/1988)ರ ಕಲಂ 102ರ ಉಪಕಲಂ (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಾರಿಇ 100 ಸಾಇಪ 2013 ದಿನಾಂಕ: 30-09-2014 ಕ್ಕೆ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗುತ್ತಿದೆ. ಅಂದರೆ,

ಅಧಿಸೂಚನೆ ಸಂಖ್ಯೆ: ಸಾರಿಇ 100 ಸಾಇಪ 2013 ದಿನಾಂಕ: 30-09-2014 ರ ಕಲಂ-ಎ ಹಾಗೂ ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಕೆಳಕಂಡಂತೆ ಮಾರ್ಪಡಿಸಲಾಗಿದೆ.

| | | |
|---|---|---|
| A | ಮಾರ್ಗ ಅಥವಾ ಮಾರ್ಗ ಮಧ್ಯದಲ್ಲಿ ಬರುವ ಪ್ರಮುಖ ಮಧ್ಯಂತರ ಸ್ಥಳಗಳು ಅಥವಾ ಯೋಜನೆಗೆ ಅನುಮೋದನೆ ನೀಡಿರುವ ಪ್ರದೇಶ. | ಯೋಜನೆಗೆ ಅನುಮೋದನೆ ನೀಡಿರುವ ಪ್ರದೇಶವು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (GBA) ವ್ಯಾಪ್ತಿಯಲ್ಲಿರುವ ಪ್ರದೇಶಗಳು ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (GBA) ವ್ಯಾಪ್ತಿಯ ಗಡಿಯಿಂದ 40.0 ಕಿ.ಮೀ. ವರೆಗಿನ ವ್ಯಾಪ್ತಿಯ ಸುತ್ತಮುತ್ತಲಿನ ಪ್ರದೇಶಗಳು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(**ಪುಷ್ಪ ವಿ.ಎಸ್**)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

**GOVERNMENT OF KARNATAKA**

No. TD 167 TDO 2025

Karnataka Government Secretariat,
Multistoried Building,
Dr. B. R. Ambedkar Veedhi,
Bengaluru, Dated:05.01.2026.

**NOTIFICATION**

Whereas the Government of Karnataka proposed to amend Notification No SARIE 100 SAEPA 2013 Dated: 30.09.2014, to extend BTS scheme to the area of the Greater Bengaluru Authority and surrounding areas up to 40 Km from its boundary. Accordingly a draft Notification was published as required by sub-section (2) of section 102 of the Motor vehicles Act 1988 (Central Act No 59 of 1988), read with section 21 of the Karnataka General Clauses Act, 1899 (Karnataka Act No. III of 1899), after giving an opportunity of being heard to the State transport undertaking and any person who is likely to be affected, in Notification No. TD 167 TDO 2025, dated:18.09.2025, in part IVA, No 601 of the Karnataka Gazette extraordinary dated:19.09.2025 inviting objections and suggestions from all persons likely to be affected within thirty days from the date of its publication in the official Gazette.

And whereas the said Gazette was made available to public on 19.09.2025.

And whereas no objections or suggestions have been received by the State Government.

Now, therefore, in exercise of the powers conferred by sub-section (1) of section 102 of the Motor Vehicles Act, 1988 (Central Act No 59 of 1988), read with section 21 of the

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



Karnataka General Clauses Act, 1899 (Karnataka Act No. III of 1899), the Government of Karnataka hereby makes the following amendment to the Notification No. SARIE 100 SAEPA 2013, Dated:30.09.2014, namely:-

In Notification No. SARIE 100 SAEPA 2013 Dated: 30.09.2014, in the table, for the column 'A' and the entries relating thereto the following shall be substituted-

| | | |
|---|---|---|
| A | Route or routes with their important intermediate points or the area in relation to which the scheme is approved. | The area in relation to which the scheme is approved is the area covered by limits of the Greater Bengaluru Authority (GBA) and also the neighboring places situated upto 40 kms from the limits of the boundaries of the Greater Bengaluru Authority. |

By order and in the name of the
Governor of Karnataka

(**Pushpa V. S.**)
Under Secretary to Government,
Transport Department.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH